# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| ಭಾಗ–೪ಎ<br>Part – IVA | ಬೆಂಗಳೂರು, ಬುಧವಾರ, ೧೦, ಡಿಸೆಂಬರ್,೨೦೨೫ ( ಮಾರ್ಗಶಿರ,೧೯, ಶಕವರ್ಷ, ೧೯೪೭)<br>BENGALURU, WEDNESDAY, 10, DECEMBER, 2025 (MARGASHIRA, 19, SHAKAVARSHA, 1947) | ನಂ.೮೦೪<br>No. 804 |
|---|---|---|

**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಎಂಟನೇ ಅಧಿವೇಶನ**

## ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–77)**

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ನ್ನು (2001ರ ಕರ್ನಾಟಕ ಅಧಿನಿಯಮ 33) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 25ರ ತಿದ್ದುಪಡಿ.-** ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ 33)ರ 25ನೇ ಪ್ರಕರಣದ (4)ನೇ

ಉಪಪ್ರಕರಣದ, (ii)ನೇ ಖಂಡದಲ್ಲಿರುವ “ಅಥವಾ ಕಿವುಡ ಅಥವಾ ಮೂಕನಾಗಿದ್ದರೆ ಅಥವಾ ಕುಷ್ಠ” ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ 33)ನ್ನು,-

(i) ರಿಟ್ ಅರ್ಜಿ ಸಿವಿಲ್ ಸಂಖ್ಯೆ:1151/2017(ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಕಾನೂನು ನೀತಿಗಾಗಿ ವಿಧಿ ಸೆಂಟರ್ ವಿರುದ್ಧ ಭಾರತ ಒಕ್ಕೂಟ ದಿನಾಂಕ:24-04-2018ರೊಂದಿಗೆ ಓದಲಾದ ಮಾನ್ಯ ಸರ್ವೋಚ್ಛ ನ್ಯಾಯಾಲಯದ ರಿಟ್ ಅರ್ಜಿ(ಸಿವಿಲ್) ಸಂಖ್ಯೆ:767/2014 ಪಂಕಜ್ ಸಿನ್ಹ ವಿರುದ್ಧ ಭಾರತ ಒಕ್ಕೂಟ, ದಿನಾಂಕ:05-07-2018ರ ತೀರ್ಪಿನ ಅನುಸರಣೆಯಲ್ಲಿ ಕುಷ್ಠರೋಗ ಬಾಧಿತ ವ್ಯಕ್ತಿಗಳಿಗಾಗಿ ; ಮತ್ತು

(ii) ಕಿವುಡ ಅಥವಾ ಮೂಕರಿಗಾಗಿ,

- ತಾರತಮ್ಯದ ಉಪಬಂಧವನ್ನು ರದ್ದುಗೊಳಿಸುವ ಸಂಬಂಧದಲ್ಲಿ ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ರಾಮಲಿಂಗಾ ರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಉದ್ಧೃತ ಭಾಗ

**XX XX XX**

25. **ವ್ಯವಸ್ಥಾಪನಾ ಸಮಿತಿಯ ರಚನೆ**.- **XX XX XX**

(4) ಯಾವೊಬ್ಬ ವ್ಯಕ್ತಿಯು,-

(i) ಒಂದು ಸಕ್ಷಮ ನ್ಯಾಯಾಲಯದಿಂದ ಅವಿಮುಕ್ತ ದಿವಾಳಿಯೆಂದು ಘೋಷಿತನಾಗಿದ್ದರೆ, ಅಥವಾ

(ii) ಅಸ್ವಸ್ಥ ಚಿತ್ತನಾಗಿದ್ದು ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದ್ದರೆ ಅಥವಾ ಕಿವುಡ ಅಥವಾ ಮೂಕನಾಗಿದ್ದರೆ ಅಥವಾ ಕುಷ್ಠ ಅಥವಾ ಇತರ ಯಾವುದೇ ಭಯಂಕರ ಅಥವಾ ಸಾಂಕ್ರಾಮಿಕ ಖಾಯಿಲೆಯಿಂದ ಪೀಡಿತನಾಗಿದ್ದರೆ, ಅಥವಾ

**XX XX XX**

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

EIGHTH SESSION

# THE KARNATAKA HINDU RELIGIOUS INSTITUTIONS AND CHARITABLE ENDOWMENTS(AMENDMENT) BILL, 2025

## (LA Bill No. 77 of 2025)

A Bill further to amend the Karnataka Hindu Religious Institutions and Charitable Endowments Act, 1997.

Whereas it is expedient further to amend the Karnataka Hindu Religious Institutions and Charitable Endowments Act, 1997 (Karnataka Act 33 of 2001) for the purposes hereinafter appearing.

Be it enacted by the Karnataka State Legislature in the seventy sixth year of the Republic of India, as follows:-

**1. Short title and commencement.-** (1) This Act may be called the Karnataka Hindu Religious Institutions and Charitable Endowments (Amendment) Act, 2025.

(2) It shall come into force at once.

**2. Amendment of section 25.-** In the Karnataka Hindu Religious Institutions and Charitable Endowments Act, 1997(Karnataka Act 33 of 2001) in section 25, in sub-section (4), in clause (ii),the words "or if he is deaf or mute or is suffering from virulent form of leprosy" shall be omitted.

## STATEMENT OF OBJECTS AND REASONS

It is considered necessary further to amend the Karnataka Hindu Religious Institutions and Charitable Endowment Act, 1997 (Karnataka Act 33 of 2001), to remove the discriminatory provision in respect of,-

(i) leprosy affected persons in conformity with the decision of the Honorable Supreme Court in Writ Petition (Civil) No. 767/2014 Pankaj Sinha V/s Union of India, dated: 05.07.2018 read with Writ Petition Civil No. 1151/2017(PIL-W) Vidhi Centre for Legal Policy V/s Union of India dated: 24.04.2018; and

(ii) deaf or mute.

Hence, the Bill,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## FINANCIAL MEMORANDUM

There is no extra expenditure involved in the proposed Legislative measure.

**RAMALINGA REDDY**
Minister for Transport and Muzrai

**M.K. VISHALAKSHI**
Secretary
Karnataka Legislative Assembly

## ANNEXURE
## EXTRACT FROM THE KARNATAKA HINDU RELIGIOUS INSTITUTIONS AND CHARITABLE ENDOWMENT ACT, 1997 (KARNATAKA ACT 33 OF 2001)

**XX XX XX**

**25. Constitution of the Committee of Management.-** (4) A person shall be disqualified for being appointed or continuing as a member of the Committee of Management of any notified institution,-

(i) if he is declared as an undischarged insolvent by a competent court; or

(ii) if he is of unsound mind and stands so declared by a competent court of law or if he is a deaf or mute or is suffering from virulent form of leprosy or contagious disease; or

**XX XX XX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH